Regd No B G. 155

Sri

2—9—1964

48 th Year
ನೇ ವರ್ಷ

Sri 'Satyavadi'
— DAILY —
MYSORE 4

ಸತ್ಯವಾದಿ

ಸ್ಥಾಪಕರು:— ಅರಮನೆ ಸಿಂಸ್ಥೆದಾರ್ ಎಂ ವಿ ಸುಬ್ಬರಾಯುರು [2 ನಪೈ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಸತ್ಯವಾದಿ ಪತ್ರಿಕೆಯನ್ನು ತಪ್ಪದೇ ಓದಿ
ದಿನ ಪತ್ರಿಕೆ ತಿಂಗಳಿಗೆ 40 ನೆ ಪೈ

Protect the Cow
ಗೋಸಂರಕ್ಷಣೆ ಮಾಡಿ

ವಿಜಯದಶಮಿಯಂದು ಶ್ರೀವಸ್ತ್ರಾಲಂಕಾರರಾಜರವರು ಜಂಬೂಸವಾರಿ ಮೆರವಣಿಗೆಯು ಈ ಸಲವೂ ಎಂದಿನಂತೆ ನಡೆಯುವುದೆಂದು ತಿಳಿಯಬಂದಿದೆ.

★

ಮೈಸೂರು ಜಂಕ್ಷನ್ ಸ್ಟೇಷನ್

7 ಲಕ್ಷ ರೂಗಳ ಖರ್ಚಿನಿಂದ ರೈಲ್ವೇ ಸ್ಟೇಷನ್ನಿನಲ್ಲಿಯು ಪುನರಾಕೃತಿಯ ಎಂಟ್ರಾನ್ಸುಗಳನ್ನೂ ಹೊಸ ಸಿಗ್ನಲಿಂಗ್ ವ್ಯವಸ್ಥೆಯನ್ನೂ ಡಿವಿಜನಲ್ ಸೂಪರಿಂಟೆಂಡೆಂಟರವರು ಸೋಮವಾರ ಪತ್ರಿಕೋದ್ಯೋಗಿಗಳಿಗೆ ತೋರಿಸಿ ವಿವರಿಸಿದರು.

❋

ಕಾಶ್ಮೀರ ಸಮಸ್ಯೆ

ಫಿಲಡೆಲ್ಫಿಯಾದಲ್ಲಿ ಅಮೆರಿಕಾ ಸಂಸ್ಥಾನ ಶಾಖೆ ಕಾರ್ಯದರ್ಶಿ ಡೀಕಿಂಸ್ಕರವರು ಕಾಶ್ಮೀರಂದ ವಿಚಾರದಲ್ಲಿ ಭಾರತ ಪಾಕಿಸ್ತಾನಗಳ ವಿರುದ್ಧತೆಯು ಇನ್ನೂ ವೃದ್ಧಿಸ್ಥಿತಿ ಆಗದಿರುವದು ಆಪಾಯಕಾರಿ ಸನುಸ್ಥೆಯಲ್ಲಿ ಒಂದಾಗಿದೆ ಎಂದರುಂ

❋

ಮುಷ್ಕರ

ಚಿಕ್ಕಮಗಳೂರು — ಕರ್ಕಳುಂಡಾ ಮತ್ತು ಎಲೆಮಂಡಲ ಟೀ ತೋಟಗಳ 700 ಕೆಲಸಗಾರರು ಮುಷ್ಕರ ಹಿಡಿದಿರುವರು

★

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಆಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ರಾಜಕಾರ್ಯಾಸಕ್ತ, ಜ್ಯೋತಿರ್ವಿದ್ವನ್ಮಣಿ
ಸಂಪತ್ಕೃಷ್ಣ ಜೋಯಿಸರವರಿಂದ
ತಿ ಬುಧವಾರ ಏಕಾದಶಿ ಪುನರ್ವಸು

ವಿದೇಶೀ ವಿನಿಮಯ ಉಲ್ಲಂಘನೆ

ಇದೇ ವರ್ಷದ ಜುಲೈ ತಿಂಗಳಿನಲ್ಲಿ ಭಾರತೀಯ ಸುಂಕ ಇಲಾಖೆಯ ಅಧಿಕಾರಿಗಳು ಒಟ್ಟು 15.79 ಲಕ್ಷ ರೂಗಳ ಮೌಲ್ಯದಷ್ಟು ಅಕ್ರಮವಾಗಿ ಸಾಗಿಸುತ್ತಿದ್ದ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ ಕಳೆದ ವರ್ಷ ಇದೇ ತಿಂಗಳಲ್ಲಿ 30.62 ಲಕ್ಷ ರೂಗಳಷ್ಟು ಮೌಲ್ಯದ ಅಕ್ರಮ ಸಾಗಾಣಿಕೆ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿತ್ತು ಜುಲೈ ತಿಂಗಳಲ್ಲಿ ಸುಮಾರು 4-91 ಲಕ್ಷ ರೂಪಾಯಿ ಗಳಷ್ಟು ಮೌಲ್ಯದ ಚಿನ್ನವನ್ನು ವಶಪಡಿಸಿಕೊಳ್ಳಲಾಯಿತು ವಿದೇಶಿ ವಿನಿಮಯ ಉಲ್ಲಂಘನೆಗೆ ಸಂಬಂಧಿಸಿದ 11 ಮೊಕದ್ದಮೆಗಳ ವಿಚಾರಣೆ ನಡೆಸಿ ತಪ್ಪಿತಸ್ಥರಿಗೆ ದಂಡ ಹಾಗೂ ಶಿಕ್ಷೆಯನ್ನು ವಿಧಿಸಲಾಯಿತು

★

ಯಾತ್ರಿಕರ ಮರಣ

ಚಾಲ್ಮಾಕ್ಕೆ ಮತೀಯ ಹಬ್ಬಕ್ಕಾಗಿ ಹೋಗಿ ವಾಪಸು ಬರುತ್ತಿದ್ದ ಒಂದು ಬಸ್ ಆಕಸ್ಮಾತ ಕೊರಕಲಿಗೆ ಬಿದ್ದು ಅದರಲ್ಲಿದ್ದ ಯಾತ್ರಿಕರು 76 ಮಂದಿಯಲ್ಲಿ ಹೈಕಿ 20 ಮಂದಿ ಮೃತರಾದರು ಎಂದು ಮೆಕ್ಸಿಕೋದ ಜುಪೋಲಾದಿಂದ ವರದಿ ಬಂದಿದೆ.

❋

ದೀಪದ ಕಡ್ಡಿ ಕಾರ್ಖಾನೆಗಳು
ಅಬ್ಕಾರಿ ಸುಂಕಕ್ಕೆ ಸಂಚಕಾರ
ಕೊಡುತ್ತಿವೆ

ನವದೆಹಲಿ— ದಕ್ಷಿಣ ಭಾರತದಲ್ಲಿನ ಅನೇಕ ದೀಪದಕಡ್ಡಿ ಕಾರ್ಖಾನೆಗಳ ಮೇಲೆ ನಡೆಸಲ್ಪಟ್ಟ ಧಾಳಿಗಳಿಂದ ಅವರು 2 ಕೋಟಿ ರೂಗಳಷ್ಟು ಅಬ್ಕಾರಿ ಸುಂಕವನ್ನು ಕೊಡದೇ ತಪ್ಪಿಸಿಕೊಂಡಿರುವುದು ತಿಂಡು ಬಂದಿದೆ.

ದಸ್ತಗಿರಿ

ಬೆಂಗಳೂರು ವಾರ್ತೆಯಂತೆ, ಧಾರವಾಡ, ಬಿಜಾಪುರ ಮತ್ತು ಉತ್ತರ ಕನಡ ಜಿಲ್ಲೆಗಳಲ್ಲಿ ಈಚೆಗೆ ಆದ ಗಲಭೆಗಳ ಸಂಬಂಧದಲ್ಲಿ 120 ಮಂದಿ ದಸ್ತಗಿರಿ ಮಾಡಲ್ಪಟ್ಟಿದ್ದಾರೆ.

★

ಸಿಕ್ ಯುವಕನ ತಾಪತ್ರಯ

ಭೂಗರ್ಭದ ರೈಲಿನ ಗಾರ್ಡ್ ಆದ 28 ವರ್ಷದ ಸಿಕ್ ಮತದ ಅಮರ್ ಸಿಂಗ್ ರವರು ತಮ್ಮ ಸಿಕ್ ರುಮಾಲನ್ನು ಧರಿಸದೆ ಟೋಪಿ ಧರಿಸಬೇಕೆಂಬ ಆಜ್ಞೆ ಆಗಿರುವುದಾಗಿ ಲಂಡನ್ ವಾರ್ತೆ

★

16 ಸಾವಿರ ಬಂಧನ

ನವದೆಹಲಿ— ಆಹಾರ ಬೆಲೆ ಏರಿಕೆ ವಿರುದ್ಧ ಕಮ್ಯೂನಿಸ್ಟರು ನಡೆಸುತ್ತಿರುವ ದೇಶವ್ಯಾಪಿ ಚಳವಳಿಯಲ್ಲಿ ಇಲ್ಲಿಯವರೆಗೆ 16000 ಬಂಧಿಸಲ್ಪಟ್ಟಿರುವರು.

★

ಗೋವಾ ಡಯು ಡಾಮನ್
ಭಾರತದ್ದು

ಭಾರತದ ಪ್ರತಿಭಟನೆಯು ಫಲವಾಗಿ ಕಳೆದ ವರ್ಷ ವಿಶ್ವಸಂಸ್ಥೆ ಡೆಮೊಗ್ರಾಫಿಕ್ ಬುಕ್‌ನಲ್ಲಿ ಗೋವಾ ಡಯು ಡಾಮನ್‌ನನ್ನು ಭಾರತದ ಭಾಗವಾಗಿ ಕಾಣಿಸಲಾಗಿದೆ

—

ಸ್ಮಾರಕ ತೆಗೆದುಬೇಕು

ಬೆಂಗಳೂರು— ಕಾರ್ಪೊರೇಷನ್ನಿನ ಎದುರಿಗಿರುವ ಸಿನೊಟಾಫ್ ಸ್ಮಾರಕವನ್ನು 15 ದಿನಗಳಲ್ಲಿ ತೆಗೆಯದಿದ್ದರೆ ನೇರ ಕಾರ್ಯಾಚರಣೆ ನಡೆಸಿ ತೆಗೆದುಹಾಕಲಾಗುವುದೆಂದೂ ಕನ್ನಡ ಚಳವಳಿಗಾರರು ತಮ್ಮ ಕಟ್ಟಕಡೆ ನಿರ್ಧಾರವನ್ನು ಸರಕಾರಕ್ಕೂ ಕಾರ್ಪೊರೇಷನ್ನಿಗೂ ತಿಳಿಸಿದ್ದಾರೆ.

ಯಾರಪನ ಎ ಗಂಟು

ಡೇರಾಡೂನ್— ಅಕಾಸಿಚನ್ನೆನ್ನು ಚೀಣಿಯರಿಗೆ ಗುತ್ತಿಗೆ ಕೊಟ್ಟು ಅವರೊಡನೆ ಗಡಿ ವ್ಯಾಜ್ಯ ಪರಿಹರಿಸಿಕೊಳ್ಳಬೇಕೆಂದು ಶ್ರೀ ಜಯಪ್ರಕಾಶ ನಾರಾಯಣರ ಯೋಜನೆಯು ಬಹಳ ಸರಿಯಾಗಿದೆಯೆಂದು ದಿಂವರು ಕಮ್ಯೂನಿಸ್ಟ್ ನಾಯಕ ಎಕೆ ಗೋಪಲನ್‌ರು ಹೇಳಿರುವರು.

ಜ್ಯೋತಿಷ್ಯಕ್ಕೂ ಸಚಿವಾಲಯ !

ಕಾಂಗ್ರೆಸಿನ ಬಿಜಾರು ಗುಂಪಿನನಾಯಕ ಶ್ರೀ ಎಂಶ್ರು ಕೇಂದ್ರದಲ್ಲಿ ಜ್ಯೋತಿಷ ಸಚಿವಾಲಯ ಸ್ಥಾಪಿಸಲು ಸಲಹೆ ಮಾಡಿರುವರೆಂದು ನವದೆಹಲಿ ವಾರ್ತೆ.

★

ರೋಗಿಗಳ ದುರದೃಷ್ಟ !

ತಂಜಾವೂರು— ಅರಂತಂಗಿಯಲ್ಲಿನ ಅಸ್ಪತ್ರೆಗೆ ಆಹಾರ ಒದಗಿಸಲು ಯಾರೂ ಟೆಂಡರು ಕೊಡಲಿಲ್ಲವೆಂದೂ ಅದರಿಂದ ರೋಗಿಗಳೇ ತಮ್ಮ ಆಹಾರ ಒದಗಿಸಿಕೊಳ್ಳಬೇಕಾಗಿದೆಯೆಂದೂ ಜಿಲ್ಲಾ ವೈದ್ಯಕಲ್ ಆಫೀಸರು ಹೇಳಿದರು.

★

ಕೊಹಿಮಾ— ನಾಗಾ ದಾರ್ಢ್ಯಕಾರಿಗಳು ಮೊಕಾಕಚಂಗು ಮತ್ತು ವೋಖಾ ಮಧ್ಯದ ಪ್ರಮುಖ ಸೇತುವೆಯನ್ನು ಉಡಾಯಿಸಿದರು.

★

ಬೆಂಗಳೂರು— ಫೋರ್ಜರಿ ಪಾಸ್‌ಪೋರ್ಟುಗಳನ್ನು ತಯಾರಿ ಹೆಚ್ಚಿಚ್ಚು ಸೀಮೆಂಟ್ ಮಿಷಿನ್ ಕಡಿದು ಕಳ್ಳಸಾಟಿ ನಡೆಸುತ್ತಿದ್ದ ಗುಂಪಿನ ಪತ್ತೇದಾರಿಂದಾದಿನಲ್ಲಿದ್ದ ಪೋಲೀಸರು ಒಬ್ಬನನ್ನು ಬಂಧಿಸಿದ್ದಾರೆ.

ರಾಷ್ಟ್ರ ಭಾಷೆ

(ಮುಂದುವರಿದುದು)

ನಂತರ ವ್ಯಾಪಾರಕ್ಕಾಗಿ ಬಂದು ದೇಶವನ್ನೇ ಆಳಲು ಪ್ರಾರಂಭಿದ ಆಂಗ್ಲರು ಬಹುಬೇಗನೇ ಹಿಂದೂಗಳಲ್ಲಿರುವ ರಾಷ್ಟ್ರೀಯತೆಯ ಪ್ರಖರತೆಯನ್ನು ಅರಿತರು ಎಲ್ಲಿಯವರೆಗೆ ಸಂಸ್ಕೃತಭಾಷೆ ಇರುವುದೋ ಅಲ್ಲಿಯವರೆಗೆ ತಮ್ಮ ಆಳ್ವಿಕೆ ನಿಷ್ಕಂಟಕವಾಗಿರಲು ಸಾಧ್ಯವಿಲ್ಲವೆಂದು ಅರಿತರು : ಕೂಡಲೇ ಆಂಗ್ಲಾ ಭಾಷೆಯ ಶಾಲೆಗಳು ಸಂಸ್ಕೃತ ಶಾಲೆಗಳಿಗೆ ಬದಲಾಗಿ ಪ್ರಾರಂಭಿಸಲ್ಪಟ್ಟವು ; ಇದಕ್ಕೆ ಕೆಲವು ಹಿಂದೂಗಳು ಬೆಂಬಲವನ್ನೂ ನೀಡಿದರು : ಒಂದು ಶತಮಾನದ ಹಿಂದೆ ನೆಟ್ಟ ಬೀಜವು ವೃಕ್ಷವಾಗಿ ಈಗ ನಾವು ಅದಂ ಫಲವನ್ನು ಅನುಭವಿಸುತ್ತಿದ್ದೇವೆ : ಆಂಗ್ಲರು ಜಾಗ್ರತೆ ಸಂಸ್ಕೃತವನ್ನು ನಾಶಮಾಡಲು ಸಂಸ್ಕೃತ ವಿದ್ವಾಂಸರಿಗೆ ಕೆಲಸ ಕೊಡಲಿಲ್ಲ ; ಇಂಗ್ಲೀಷು ಭಾಷೆಯನ್ನು ಓದಿದವರಿಗೆ ಜಾಗ್ರತೆ ಕೆಲಸವಾಗಿ ಕೈಬಿಂಬಾ ಸಂಬಳ ಬರುತ್ತಿತ್ತು ; ಗೀರ್ವಾಣ ಭಾಷೆಯಾದ ಸಂಸ್ಕೃತವನ್ನು ಮೃತಭಾಷೆಯೆಂದು ಕರೆದರು : ಇದರಿಂದ ಸಂಸ್ಕೃತ ಭಾಷೆ ಓದುವವರು ಕಮ್ಮಿಯಾದರು ; ಓದಿದವರಿಗೂ ಸರಿಯಾಗಿ ಕೆಲಸವಿಲ್ಲ, ಸಂಬಳವಿಲ್ಲ, ಮತ್ತು ಜೀವನಾವಶ್ಯಕತೆಗಳಿಗಾಗಿ ಅವರು ಬಹಳ ಶ್ರಮಪಡಬೇಕಾಯಿತು.

ಈಗ ನಮಗೆ ಸ್ವತಂತ್ರ ಬಂದಿದೆ ; ನಮ್ಮ ರಾಜ್ಯಾಂಗವನ್ನು ನಾವೇ ರೂಪಿಸಿಕೊಂಡಿದ್ದೇವೆ ; ಆದರೇನು ? ಆಂಗ್ಲರು ಪ್ರಯೋಗಿಸಿದ ವಿಷದಿಂದ ವಿಸ್ಮೃತಿಯನ್ನೆರೆದಿರುವ ನಮ್ಮ ಮುಖಂಡರಿಗೆ ನಮ್ಮ ಭಾಷೆ, ಸಂಸ್ಕೃತಿ, ಧರ್ಮದ ಬಗ್ಗೆ ಉದಾಸೀನತೆ ಉಂಟಾಗಿದೆ ; ಪ್ರತಿಯೊಂದು ವಿಷಯಕ್ಕೂ ಪಾಶ್ಚಾತ್ಯರನ್ನು ಅನುಕರಣೆ ಮಾಡುವುದರಲ್ಲಿ ಅವರು ಹರ್ಷಹೊಂದುತ್ತಾರೆ ; ದೇಶಾದ್ಯಂತ ಮೇಧಾವಿಗಳು ಭಾರತದ ಐಕ್ಯತೆಗಾಗಿ ಸಂಸ್ಕೃತವನ್ನೇ ರಾಷ್ಟ್ರಭಾಷೆ ಮಾಡಬೇಕೆಂದು ಹೇಳುತ್ತಿದ್ದರೂ ಕೂಡ ಏನೂ ಪ್ರಯೋಜದವಾಗಿಲ್ಲ.

ಮುಖ್ಯವಾಗಿ ನಾವು ತಿಳಿಯಬೇಕಾದ ವಿಷಯವೆಂದರೆ ಭಾರತವು ಆರ್ಷೇಯ ವಾಗಿಯೂ ಒಂದು ರಾಷ್ಟ್ರವಾಗಿದೆ ; ಇದಕ್ಕೆ ವಿಷ್ಣುಪುರಾಣ, ಪಾಂಚರಾತ್ರಾಗಮ ಮುಂತಾದ ಶಾಸ್ತ್ರಗಳೇ ಆಧಾರ : ಈ ರಾಷ್ಟ್ರದಲ್ಲಿ ರಾಜಭಾಷೆಯಾಗಿದ್ದುದೆಂದರೆ ಸಂಸ್ಕೃತ : ಏಕೆಂದರೆ ಅದು ಒಂದು ಭಾಷೆಯನ್ನು ಹೊರತ್ಪಡಿಸಿ ಭಾರತದ ಎಲ್ಲಾ ಕಡೆಯಲ್ಲಿಯೂ ತಿಳಿಯಬಲ್ಲರು ; ಆಂಗ್ಲಾ ಭಾಷೆಯನ್ನು ಎಲ್ಲಾ ಕಡೆಯಲ್ಲಿ ಓದುತ್ತಿದ್ದರೂ ಅದು ವಿದೇಶಭಾಷೆಯೇ ಹೊರತು ನಮ್ಮ ದೇಶಭಾಷೆಯಲ್ಲ ; ಸಂಸ್ಕೃತದಲ್ಲಿರುವ ಜ್ಞಾನ, ಶಬ್ದಸೌಂದರ್ಯ, ಅದರಿಂದ ಉಂಟಾಗುವ ಶಾಂತಿ, ಸೌಖ್ಯಗಳು ಆಂಗ್ಲಾಭಾಷೆಯಿಂದ ಉಂಟಾಗಲಾರದು ; ಆದುದರಿಂದ ಸಂಸ್ಕೃತವೇ ನಮ್ಮ ರಾಷ್ಟ್ರಭಾಷೆಯಾಗುವುದು ಅವಶ್ಯಕ

ಇದಕ್ಕೆ ನಮ್ಮ ಕರ್ತವ್ಯವೇನು ? ಪ್ರತಿಯೊಬ್ಬರೂ ಸಂಸ್ಕೃತವನ್ನು ಕಲಿಯಬೇಕು ; ತಮ್ಮ ಮಕ್ಕಳಿಗೆ ಸಂಸ್ಕೃತ ಕಲಿಯಲು ಪ್ರೋತ್ಸಾಹಿಸಬೇಕು ; ಸಂಸ್ಕೃತದ ಪುಸ್ತಕಗಳನ್ನು ಹೆಚ್ಚುಹೆಚ್ಚಾಗಿ ತರಿಸಿ ಓದಬೇಕು : ನಮ್ಮ ನಾಯಕರುಗಳಿಗೆ ಸಂಸ್ಕೃತವನ್ನು ರಾಷ್ಟ್ರಭಾಷೆಯಾ ಮಾಡುವಂತೆ ಮನವಿಮಾಡಿಕೊಳ್ಳಬೇಕು.

— ಆ. ನ. ಅಯ್ಯಂಗಾರ್, ಹೊಂಗನೂರು



ಗೋರಕ್ಷಣೆ ಪ್ರಾಣದೆಯೂ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ

ವುಡ್‌ಲಾಂಡ್ 28-8-64 ರಿಂದ
ಶಿ ಸು ಅಮೋಘ ಆರಂಭ
ಹೋಮಿ ವಾಡಿಯಾರವರ ಈಸ್ಟ್‌ಮನ್ ಕಲರಿನ
.... ಅದ್ಭುತ ಸನ್ನಿವೇಶಗಳಿಂದ ಕೂಡಿದ ಮನಮೋಹಕ ಹಿಂದಿ ಚಿತ್ರ ....
ಚಾರ್ ದರ್ವೇಶ್ Char Darvesh
ಭೂಮಿಕೆಯಲ್ಲಿ — ಫಿರೋಜಖಾನ್, ಸಯೆದಾ ಖಾನ್, ನಾಜ್
[ದಿನವಹಿ 3 ಪ್ರದರ್ಶನಗಳು]

ಆಪೆರಾ— 28-8-64 ರಿಂದ
ಅತ್ಯಮೋಘ ತೆಲುಗು ಚಿತ್ರ [ದಿನ 3 ಆಟಗಳು]
ಗುಡಿಗಂಟಲು
ತಾರಾಗಣ— ಎನ್ ಟಿ ರಾಮರಾವ್, ಕೃಷ್ಣಕುಮಾರಿ, ರೇಲಂಗಿ, ಗಿರಿಜ

SHAKTI
SUDHA
Superb Tonic

Help The ' Gorakshana'
" ಗೋರಕ್ಷಣ " ಕ್ಕೆ ಬೆಂಬಲಿಗರಾಗಿರಿ
ಕನ್ನಡನಾಡಿನಲ್ಲಿ ಗೋರಕ್ಷಣೆ, ಪ್ರಾಣಿದಯೆ, ಶಾಕಾಹಾರ, ಪಶುವೈದ್ಯ
ವಿಚಾರಗಳಿಂದ ಕೂಡಿದ ಏಕೈಕ ಮಾಸಪತ್ರಿಕೆ.
' ಗೋರಕ್ಷಣ ' ಕ್ಕೆ ಸಹಾಯಧನವನ್ನೂ ಲೇಖನಗಳನ್ನೂ
ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು
ವಾರ್ಷಿಕ ಚಂದಾ 50 ನ ಪೈ
ಅಭಿಮಾನಿಗಳು ರೂ 10 (ಒಂದೇ ಸಾರಿ) ಸಹಾಯಕರು ರೂ 25 (ಒಂದೇ ಸಾರಿ
ವಿಳಾಸ— ಗೋರಕ್ಷಣ ಆಫೀಸು ಚಾಮರಪುರಂ, ಮೈಸೂರು 4

*

ಚಂದಾ ಬಾಕಿಯಿದೆ ಮುಗಿದಿರುವವರು ದಯವಾಡಿ ಪಾವತಿ ಮಾಡಬೇಕಾಗಿ ವಿನಂತಿ ; ಅಭಿಮಾನಿಗಳೂ, ಸಹಾಯಕರೂ ಆಗಿ ಹೆಚ್ಚಿಚ್ಚು ಮಂದಿ ನೆರವು ನೀಡಿ ಈ ಪವಿತ್ರ ಕಾರ್ಯವು ಹೆಚ್ಚಿಚ್ಚು ಪ್ರಚಾರವಾಗಲು ಸಹಕರಿಸಬೇಕೆಂದು ವಿನಂತಿ ; ಇವರ ಹೆಸರು ಆಗಾಗ್ಗೆ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

Edited, Printed & Published by the Proprietor Dharma Prachara Nirata M. S. Krishna Rao at the Satyavadi Press, Chamarajapuram, Mysore 4.